ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಹಾಗೂ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿರುವ ಹಣವನ್ನು ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ.

ಕಾಂಪೌಂಡ್ ತೆರವುಗೊಳಿಸುವುದು

90 : (182)

ಶ್ರೀ ಸುರೇಶ್‌ಗೌಡ (ನಾಗಮಂಗಲ)

ಅ) ಬಿಬಿಎಂಪಿ ವ್ಯಾಪ್ತಿಯ ಜ್ಞಾನಜ್ಯೋತಿ ನಗರ ಬಡಾವಣೆ 1ನೇ ಕ್ರಾಸ್‌ನಲ್ಲಿ ರಸ್ತೆ ಅಡ್ಡಲಾಗಿ ನಿರ್ಮಿಸಿರುವ ಶೆಡ್ ಹಾಗೂ ಕಾಂಪೌಂಡನ್ನು ತೆರವು ಗೊಳಿಸಲಾಗಿದೆಯೇ;

ಆ) ವಿಧಾನ ಸಭೆಯಲ್ಲಿ ಹಲವು ಬಾರಿ ಮಾನ್ಯ ಮುಖ್ಯಮಂತ್ರಿಯವರು ಭರವಸೆ ನೀಡಿದ್ದರೂ ಸಹ ಈವರೆವಿಗೂ ಕಾಂಪೌಂಡ್ ಹಾಗೂ ಶೆಡ್‌ನ್ನು ತೆರವುಗೊಳಿಸಲು ಬಿಬಿಎಂಪಿ ಅಧಿಕಾರಿಗಳು ವಿಳಂಬ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ವಿಧಾನ ಸಭೆಗೆ ನೀಡಿದ ಭರವಸೆಯಂತೆ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಕಾಂಪೌಂಡ್ ತೆರವುಗೊಳಿಸಲು ಬಿಬಿಎಂಪಿಯವರು ವಿಳಂಬ ನೀತಿ ಅನುಸರಿಸಲು ಕಾರಣವೇನು;

ಈ) ಮುಖ್ಯಮಂತ್ರಿಯವರು ಶಾಸನ ಸಭೆಗೆ ನೀಡಿದ ಭರವಸೆಯಂತೆ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಶೆಡ್ ಹಾಗೂ ಕಾಂಪೌಂಡ್ ಅನ್ನು ಯಾವಾಗ ತೆರವುಗೊಳಿಸಲಾಗುವುದು?

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಜರಾಜೇಶ್ವರಿನಗರ ವಲಯದಲ್ಲಿನ ಜ್ಞಾನಜ್ಯೋತಿನಗರ 1ನೇ ಅಡ್ಡರಸ್ತೆಯಲ್ಲಿ ರಸ್ತೆಗೆ ಅಡ್ಡಲಾಗಿ ಸ್ವತ್ತಿನ ಸಂಖ್ಯೆ: 47ರಲ್ಲಿ ನಿರ್ಮಿಸಿರುವ ಕಾಂಪೌಂಡ್ ಖಾಸಗಿ ಸ್ವತ್ತಾಗಿದ್ದು, ಇದು ವಾರ್ಡ್ ನಂ. 129ರ ವ್ಯಾಪ್ತಿಗೆ ಬರುತ್ತಿದೆ. ರಸ್ತೆ ನಿರ್ಮಾಣಕ್ಕಾಗಿ 286.25 ಚದರ ಅಡಿ ಜಾಗವನ್ನು ಭೂಸ್ವಾಧೀನ ಕಾಯ್ದೆಯಲ್ಲಿ ನಿಗಧಿಪಡಿಸಿರುವ ಕಾರ್ಯವಿಧಾನವನ್ನು ಅನುಸರಿಸಿ, ಭೂ ಸ್ವಾಧೀನ ಪಡಿಸಿಕೊಂಡು ನಂತರ ಶೆಡ್ ಹಾಗೂ ಕಾಂಪೌಂಡ್‌ನ್ನು ತೆರವುಗೊಳಿಸಬೇಕಾಗಿರುತ್ತದೆ.

ಆ) ಕಾಂಪೌಂಡ್ ತೆರವುಗೊಳಿಸಲು ಸ್ವತ್ತನ್ನು ಭೂಸ್ವಾಧೀನ ಕಾಯ್ದೆಯನ್ವಯ ಸ್ವಾಧೀನಪಡಿಸಿಕೊಳ್ಳಬೇಕಾಗಿದ್ದು, ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ :-

1. ಭೂ ಪರಿಹಾರ ಹಾಗೂ ಮತ್ತಿತರ ವೆಚ್ಚಗಳು ಸೇರಿ 3,72,602/- ರೂಪಾಯಿಗಳ ವೆಚ್ಚದಲ್ಲಿ ಮೇಲ್ಕಂಡ ಸ್ವತ್ತನ್ನು ಭೂ ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರವು ದಿನಾಂಕ 07-07-2011 ರಂದು ಪಾಲಿಕೆಗೆ ಅನುಮತಿ ನೀಡಿರುತ್ತದೆ.

2. ದಿನಾಂಕ 26-05-2011 ರಂದು ಭೂ ಸ್ವಾಧೀನ ಕಾಯ್ದೆಯ ಕಲಂ 4(1) ರನ್ವಯ ಪ್ರಾರಂಭಿಕ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

3. ದಿನಾಂಕ 08-06-2011 ಸ್ವತ್ತು ಮಾಲೀಕರಿಗೆ ತಿಳುವಳಿಕೆ ಪತ್ರ (ನೋಟೀಸ್) ಜಾರಿ ಮಾಡಲಾಗಿದೆ.

4. ಭೂಸ್ವಾಧೀನತೆಯ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ 27-06-2011 ರಂದು ಕೊನೆಯ ದಿನಾಂಕವನ್ನಾಗಿ ನಿಗದಿಪಡಿಸಲಾಗಿತ್ತು.

5. ದಿನಾಂಕ 27-06-2011 ರಂದು ಭೂಸ್ವಾಧೀನ ಕಾಯ್ದೆಯ ಕಲಂ 5(ಎ) ರನ್ವಯ ವಿಚಾರಣೆ ನಡೆಸಲಾಗಿದೆ.

6. ದಿನಾಂಕ 20-08-2011 ರಂದು ಸರ್ಕಾರದ ಕಂದಾಯ ಇಲಾಖೆಗೆ ವರದಿ ಸಲ್ಲಿಸಲಾಗಿದೆ.

7. ದಿನಾಂಕ 29-10-2011 ರಂದು ಸರ್ಕಾರದಿಂದ ಕಲಂ 6(1-ಎ) ರನ್ವಯ ನಿರ್ದೇಶನ ನೀಡಲಾಗಿದೆ.

8. ದಿನಾಂಕ 09-09-2011 ರಂದು ಸ್ವತ್ತನ್ನು ಜಂಟಿ ಅಳತೆ ಮಾಡಿ ವರದಿ ಸಲ್ಲಿಸುವಂತೆ ತಹಶೀಲ್ದಾರ್‌ರವರಿಗೆ ಪತ್ರ ಬರೆಯಲಾಗಿದೆ.

9. ತಹಶೀಲ್ದಾರರು ದಿನಾಂಕ : 22-03-2012 ರಂದು ಜಂಟಿ ಅಳತೆ ಕಾರ್ಯ ಪೂರೈಸಿರುತ್ತಾರೆ. ಇವರಿಂದ ವರದಿ ಬಂದ ಕೂಡಲೇ 6(1) ಅಂತಿಮ ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಳ್ಳಲಾಗುವುದು. ಅಧಿಸೂಚನೆ ಹೊರಡಿಸಿದ ನಂತರ ಭೂಸ್ವಾಧೀನ ಕಾಯ್ದೆಯ ಕಲಂ 9 ಮತ್ತು 10 ರಂತೆ ವಿಚಾರಣೆ ನಡೆಸಿ, ತೀರ್ಮ ರಚಿಸಲಾಗುವುದು. ಐ

- ತೀರ್ಮ ಅನುಮೋದನೆಗೊಂಡ ನಂತರ ಪರಿಹಾರವನ್ನು ಸ್ವತ್ತಿನ

ಮಾಲೀಕರಿಗೆ ಪಾವತಿಸಿ ಸ್ವತ್ತನ್ನು ಕಲಂ. 16(1) ರಂತೆ ಸ್ವಾಧೀನಪಡಿಸಿಕೊಳ್ಳಲಾಗುತ್ತದೆ.

ಈ) ಸ್ವತ್ತನ್ನು ಭೂಸ್ವಾಧೀನ ಕಾಯ್ದೆಯನ್ವಯ ನಿರ್ದಿಷ್ಟಪಡಿಸಿದ ಕ್ರಮಗಳನ್ನು ಜರುಗಿಸಿ ಭೂಸ್ವಾಧೀನಪಡಿಸಿಕೊಂಡು, ಪಾಲಿಕೆಯ ವಶಕ್ಕೆ ಪಡೆದ ನಂತರ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಕಾಂಪೌಂಡ್ ಮತ್ತು ಶೆಡ್‌ನ್ನು ತೆರವುಗೊಳಿಸಲಾಗುವುದು.

ಕ್ರೀಡಾಂಗಣದ ಕಾಮಗಾರಿ

87 : (107)

ಶ್ರೀ ರುದ್ರೇಶ್‌ಗೌಡ ವೈ.ಎನ್. (ಬೇಲೂರು)

ಅ) ಅರಸೀಕೆರೆ ತಾಲ್ಲೂಕು ಜಾವಗಲ್ ಗ್ರಾಮದ ಜಾವಗಲ್ ಶ್ರೀನಾಥ್ ಕ್ರೀಡಾಂಗಣದ ಕಾಮಗಾರಿಯು ಯಾವಾಗ ಪ್ರಾರಂಭವಾಯಿತು?

ಆ) ಈ ಕಾಮಗಾರಿಗೆ ನಿಗದಿಪಡಿಸಿದ ಅನುದಾನವೆಷ್ಟು? ಹಾಗೂ ಈಗ ಕಾಮಗಾರಿಯು ಯಾವ ಹಂತದಲ್ಲಿದೆ?

ಇ) ಈ ಕ್ರೀಡಾಂಗಣದಲ್ಲಿ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಶೌಚಾಲಯ, ಆಟಗಾರರಿಗೆ ಟ್ರ್ಯಾಕ್ ಅಳವಡಿಸಿಲ್ಲದಿರುವುದಕ್ಕೆ ಕಾರಣವೇನು?

ಈ) ಈ ಸೌಲಭ್ಯಗಳನ್ನು ಯಾವಾಗ ಒದಗಿಸಲಾಗುವುದು?

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ದಿನಾಂಕ : 21-07-2000 ರಂದು ಪ್ರಾರಂಭಗೊಂಡಿದೆ.

ಆ) ಕಾಮಗಾರಿಗೆ ನಿಗದಿ ಪಡಿಸಿದ ಅಂದಾಜು ವೆಚ್ಚ ರೂ. 14.50 ಲಕ್ಷ ಹಾಗೂ ಪೆವಿಲಿಯನ್ ಕಟ್ಟಡ ನಿರ್ಮಿಸಲಾಗಿದೆ.

ಇ) ಪೆವಿಲಿಯನ್ ಕಟ್ಟಡ ನಿರ್ಮಿಸಿದಾಗಲೇ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಲಭ್ಯವಿದ್ದ ಆಟದ ಬಯಲನ್ನು ಕ್ರೀಡಾಂಗಣ ನಿರ್ಮಿಸುವಾಗ ಸಮತಟ್ಟು ಮಾಡಲಾಗಿದೆ. ಟ್ರ್ಯಾಕ್ ಅಳವಡಿಸಲು ಲಭ್ಯವಿರುವ ನಿವೇಶನದಲ್ಲಿ ಸ್ಥಳಾವಕಾಶವಿರುವುದಿಲ್ಲ.

ಈ) ಅಗತ್ಯವಾದ ಹೆಚ್ಚುವರಿ ಸ್ಥಳವಾಕಾಶ ದೊರೆತ ನಂತರ ಟ್ರ್ಯಾಕ್ ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.